## ಕಲ್ಲಿನಲ್ಲೊಂದು ಗುಡಿಯ ಮಾಡಿ



ರಾಜರ ಆಳ್ವಿಕೆಯ ಕಾಲದಲ್ಲಿ ಕಲ್ಲಿನಿಂದ ಗುಡಿ ಗೋಪುರಗಳನ್ನು ನಿರ್ಮಿಸುವುದು ಸಾಮಾನ್ಯವಾಗಿತ್ತು. ಆದರೆ, ಇಂದಿನ ದಿನಗಳಲ್ಲಿ ಅಂಥ ಸಾಹಸದತ್ತ ಮುಖ ಮಾಡುವವರು ತೀರಾ ವಿರಳ. ಆದರೆ, ಬಾಗಲಕೋಟೆಯ ನಿಟ್ಟೂರಿನ ಗಣಪನ ಭಕ್ತರು ಗಣಪನಿಗೆ ಕಲ್ಲಿನ ಕಂಬಗಳಿಂದ ಗುಡಿ ನಿರ್ಮಿಸಿದ್ದಾರೆ. ಊರಿನಲ್ಲಿ ದೊರೆಯುವ ಕಲ್ಲನ್ನು ಉಪಯೋಗಿಸಿ ಇಲ್ಲಿನ ಎಂಟು ಮಂದಿ ಅನುಭವಸ್ಥರು ಕಲ್ಲನ್ನು ಕಂಬಗಳಾಗಿ ಕೆತ್ತಿದ್ದಾರೆ. ಮೇಲ್ಛದರವನ್ನು ಕಲ್ಲಿನಿಂದಲೇ ನಿರ್ಮಿಸಿದ್ದು ಈ ಕಲ್ಲಿನ ಗುಡಿ ತಯಾರಿಸುವಲ್ಲಿ 42 ಮಂದಿಯ ಎರಡು ತಿಂಗಳ ಅವಿರತ ಶ್ರಮ ಅಡಗಿದೆ.

■ **ಚಂದ್ರಹಾಸ ಚಾರ್ಮಾಡಿ,**
**ಬೆಳ್ತಂಗಡಿ**



## ಹೈ ಹೀಲ್ಸ್

ಹೈ ಹೀಲ್ಸ್ ಚಪ್ಪಲಿಗಳು ವಿದೇಶಿಯರ ಫ್ಯಾಷನ್ ಎಂಬುದು ವಾಡಿಕೆ ಆಯಾಗಿತ್ತು. 13ನೇ ಶತಮಾನದ ದಕ್ಷಿಣ ಭಾರತ ಶಿಲ್ಪಕಲೆಯಲ್ಲಿ ಅಂದರೆ 850 ವರ್ಷಗಳ ಹಿಂದೆಯೇ ಈ ಹೈ ಹೀಲ್ಸ್ ಚಪ್ಪಲಿಗಳ ಬಳಕೆಯ ಪರಿಕಲ್ಪನೆ ಭಾರತದಲ್ಲಿತ್ತು ಎಂಬುದಕ್ಕೆ ಈ ಚಿತ್ರವೇ ಸಾಕ್ಷಿ. ವಾರಂಗಲ್‌ನ ರಾಮಪ್ಪ ಮಂದಿರದಲ್ಲಿರುವ ಈ ಶಿಲ್ಪಕಲೆಯು ಶಿಲ್ಪಿಯ ಕಲಾತ್ಮಕತೆಗೆ ಹಿಡಿದ ಕೈಗನ್ನಡಿಯಂತಿದ್ದು, ನೋಡಲು ಆಕರ್ಷಕವಾಗಿದೆ.

■ **ಮನೀಷಾ ಪಾಟೀಲ,**
**ವಿಜಯಪುರ**

## ಮಕ್ಕಳ ಸೃಜನಾತ್ಮಕತೆ



ಮೊನ್ನೆ ಮಿಂಚು ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡದ ಸುಳ್ಯ ತಾಲ್ಲೂಕಿನ ಪ್ರೌಢ ಶಾಲೆಗಳಿಗೆ ಭೇಟಿ ನೀಡಿದ್ದೆ. ಹಾಗೆ ಕೆಮ್ರಾಲ್‌ದ ಸರ್ಕಾರಿ ಪ್ರೌಢಶಾಲೆಗೆ ಹೋದಾಗ ಮಕ್ಕಳ ಸೃಜನಾತ್ಮಕ ಚಟುವಟಿಕೆ ನೋಡಿ ದಂಗಾದೆ. ವೆಂಕಟೇಶ ಎಂಬ ಕೋಟೆ ಕೊತ್ತಲುಗಳು, ಯಕ್ಷಗಾನದ ಪಾತ್ರಗಳು, ಬೇರೆ ಬೇರೆ ಭಾವನೆಗಳನ್ನು ವ್ಯಕ್ತಪಡಿಸುತ್ತಿರುವ ಮಾನವರ ಮುಖಗಳನ್ನು ಮಕ್ಕಳು ತಯಾರಿಸಿದ್ದರು. ಜೇಡಿಮಣ್ಣಿನಲ್ಲಿ ತಯಾರಿಸಿ ಅವುಗಳನ್ನು ಸುಡಲಾಗಿತ್ತು. ಹೀಗಾಗಿ ಅವು ಗಟ್ಟಿಯಾಗಿಯೂ ಮತ್ತು ಅಂದವಾಗಿಯೂ ಇದ್ದವು. ಈ ರೀತಿ ಎಲ್ಲ ಶಾಲೆಗಳಲ್ಲಿ ಮಕ್ಕಳನ್ನು ತೊಡಗಿಸಿಕೊಂಡರೆ ಅವರಲ್ಲಿರುವ ಪ್ರತಿಭೆ ಅರಳುವುದರಲ್ಲಿ ಸಂಶಯವಿಲ್ಲ ಅಲ್ಲವೇ?

■ **ಪ್ರಕಾಶ ಎಸ್. ಮನ್ನಂಗಿ**